ನಮ್ಮಜ್ಜ, ನಮ್ಮಪ್ಪ, ನಮ್ಮಮ್ಮ, ನಮ್ಮಕ್ಕ. ಅವ್ರವೇ ಇವು ಕನಸುಗಳು. ನಂಗೊತ್ತಿತ್ತು ಇವ್ರೂ ಬರ್ತಾರೆ ಅಂತ" ಎಂದು ತಾನು ಓದುತ್ತಿದ್ದ ಕನಸಿನ ಹಾಳೆಗಳನ್ನು ವಿಕಾಸನಿಗೆ ತೋರಿಸಿದ.

ಹೀರೊನನ್ನೇ ದಿಟ್ಟಿಸಿದ ವಿಕಾಸ್ ಏನಾದರೂ ಹೇಳುವ ಮೊದಲೇ ಹೀರೋ, "ಇಲ್ಲಿದಾರಲ್ಲ ಅಜ್ಜ, ಅಪ್ಪ, ಅಮ್ಮ, ಅಕ್ಕ ಇಷ್ಟೇ ಸಾರ್ ನನ್ ಪ್ರಪಂಚ... ಅಪ್ಪ, ಅಮ್ಮ ಯಾವಾಗ್ಲೂ ನಕ್ಕೊಂಡು ತುಂಬಾ ಚೆನ್ನಾಗಿದ್ರು, ರಿಮೋಟಿಗೆ ಯಾವಾಗ್ಲೂ ಜಗಳ ಆಡ್ತಾ ಇದ್ರು. ಒಂದಿನ ಅಮ್ಮ ನೇಣು ಹಾಕ್ಕೊಂಡು ಸತ್ತೋದ್ಲು. ಆಮೇಲೆ ಅಕ್ಕಾನೇ ನನ್ನ ನೋಡ್ಕೊಂಡ್ಳು. ನಾನು ಎಷ್ಟೇ ಹಟ ಮಾಡಿದ್ರೂ ನನ್ನನ್ನ ರಮಿಸಿ, ಅವ್ಳೇ ಹೋಮ್‌ವರ್ಕ್ ಮಾಡಿಸ್ತಾ ಇದ್ಲು. ನಾನು ಓದಿ ಬೆಳ್ದು ಇಂಜಿನಿಯರ್ ಆದೆ. ದೊಡ್ಡ ಕಂಪ್ನಿ ಅದು, ಯಾವಾಗ್ಲೂ ಮೀಟಿಂಗು ಮೀಟಿಂಗು ಅಂತ ಊರಲ್ಲೇ ಇರ್ತಿರ್ಲಿಲ್ಲ. ಡೈಲಿ ರೊಟೀನ್ ಅಂತ ಅಪ್ಪ ಅಜ್ಜನ್ನ ಆಸ್ಪತ್ರೆಗೆ ಕಾರಲ್ಲಿ ಕರ್ಕೊಂಡ್ ಹೋದಾಗ ಅಪ್ಪ ಆಕ್ಸಿಡೆಂಟಲ್ಲಿ ತೀರ್ಕೊಂಡ್ಬಿಟ್ರು. ನಾನು ಮೀಟಿಂಗಲ್ಲಿದ್ದೆ ಅಕ್ಕ ಆ ವಿಷ್ಯನ ಎಸ್.ಎಮ್.ಎಸ್. ಮಾಡಿದ್ಲು. ಅದಾಗಿ ಸ್ವಲ್ಪ ದಿನದಲ್ಲೇ ಅಜ್ಜಂಗೆ ಹುಷಾರಿಲ್ದಾಗ ಲಂಡನ್‌ನಿಂದ ಓಡಿ ಬಂದೆ, ಬರೋ ಹೊತ್ತಿಗೆ ಅಜ್ಜ ಸತ್ತೋಗಿದ್ರು. ಎಲ್ಲಾರೂ ದೂರ ಆಗೋದ್ರು ಸರ್. ಲೈಫ್ ಅಂದ್ರೆ ಇಷ್ಟೇ ಅನ್ನೋ ಹಾಗಿದ್ರೆ ಇರೋ ಅಷ್ಟು ದಿನ ನನಗೆ ಇಷ್ಟ ಆಗಿರೋದನ್ನೇ ಮಾಡಾಣ ಅಂತ ಕೆಲ್ಸ ಬಿಟ್ಟು ಆಕ್ಟಿಂಗ್ ಕ್ಲಾಸ್ ಸೇರ್ಕೊಂಡೆ. ಅಲ್ಲಿಂದ ಧಾರಾವಾಹಿ, ಸಿನಿಮಾಗಳಲ್ಲಿ ಒಳ್ಳೊಳ್ಳೆ ಪಾತ್ರಗಳು ಸಿಕ್ವು, ಹೀರೊ ಆದೆ. ಜನರ ಪ್ರೀತಿ, ವಿಶ್ವಾಸ, ಅಭಿಮಾನ ಎಲ್ಲವೂ ದೊಡ್ಡವು. ಇಷ್ಟಪಟ್ಟ ಹುಡ್ಗಿ ಸಿಗ್ಲಿಲ್ಲ ಅನ್ನೋ ಬೇಜಾರು ಕಾಡತ್ತೆ ಆಗಾಗ" ಎಂದು ನಿಲ್ಲಿಸಿದ. ವಿಕಾಸ್, "ಆಮೇಲೆ?" ಎಂದಾಗ, ಖಾಲಿ ಕುರ್ಚಿಗಳನ್ನು ತೋರಿಸಿದ ಹೀರೊ, "ಇಲ್ಲಿ ನಮ್ಮನೆಯೋರು ಇದಾರೆ ಅಂತ ನಾನು ಸುಮ್ನೆ ತಮಾಷೆ ಮಾಡಿದ್ದು ಸರ್. ಸತ್ತೋರು ಹೇಗ್ ಬರ್ತಾರೆ? ಹೇಗ್ ಕಾಣಿಸ್ತಾರೆ ನೀವೇ ಹೇಳಿ ಸರ್?" ಎಂದು ನಕ್ಕ.

ವಿಕಾಸ್ ಕೂಡ ನಕ್ಕಾಗ ಹೀರೊ ಅವನನ್ನೇ ನೋಡಿ, "ನಮ್ಮಕ್ಕ ಸ್ವಲ್ಪ ದಿನದ ಹಿಂದೆ ನನ್ನ ಬಿಟ್ಟು ಎಲ್ಲಿಗೋ ಹೋಗಿದ್ಲು ಸರ್... ಎಲ್ಲಿದಾಳೋ ಹೇಗಿದಾಳೋ ಇದೂವರೆಗೆ ಗೊತ್ತಿರ್ಲಿಲ್ಲ... ಆದ್ರೆ ನಿಮ್ಮ ಅಡ್ವರ್ಟೈಸ್‌ಮೆಂಟ್‌ನ ಅವ್ಳು ನೋಡಿದ್ರೆ ಆದ್ರೆ ಗ್ಯಾರಂಟಿ ಇಲ್ಲಿಗೆ ಬಂದೇ ಬರ್ತಾಳೆ ಅಂತ ಅನ್ನೋಕ್ ಶುರುವಾಯ್ತು, ಅದ್ಕೇ ಬಂದೆ. ನೋಡಿ ನಮ್ಮಕ್ಕ ಹ್ಯಾಗ್ ಇಲ್ಲ್ ಬಂದು ಕೂತಿದಾಳೆ ಅಂತ" ಎಂದು ಇನ್ನೊಂದು ಖಾಲಿ ಕುರ್ಚಿಯನ್ನು ತೋರಿಸಿ ನಕ್ಕ. "ನಮ್ಮಕ್ಕಂಗೆ ಪದೇ ಪದೇ ಬಿದ್ದು ಕಾಡೋ ಕನಸುಗಳಿದಾವೆ ಅನ್ನೋದು ನಂಗೆ ಗೊತ್ತಿತ್ತು ಸರ್" ಎಂದು ತನ್ನ ಪತ್ತೇದಾರಿ ಸಾಮರ್ಥ್ಯಕ್ಕೆ ಹೆಮ್ಮೆ ಪಟ್ಟುಕೊಂಡ. ವಿಕಾಸ್ ಅವನನ್ನೇ ನೋಡುತ್ತಿದ್ದ.



ಸ್ಟಾರ್ ಆಗಿದ್ದ ಹೀರೊನ ಪರಿಚಯ ವಿಕಾಸ್‌ಗೆ ಹೊಸದಾಗೇನೂ ಆಗಬೇಕಿರಲಿಲ್ಲ. ಅವನ ಅಕ್ಕನ ಮದುವೆಗೆಂದು ಗಂಡಿನ ಊರಿಗೆ ಕುಟುಂಬ ಸಮೇತರಾಗಿ ಹೋಗುತ್ತಿದ್ದಾಗ ಬಸ್ಸು ನಾಲೆಗೆ ಬಿದ್ದ ಇತರರೊಂದಿಗೆ ಅಪ್ಪ–ಅಮ್ಮ–ಅಕ್ಕನೂ ಸತ್ತು ಹೋಗಿದ್ದರು. ಈ ವಿಷಯ ಅವನ ವಿಕಿಪೀಡಿಯಾ ಪೇಜಿನಲ್ಲಿಯೇ ಇತ್ತು.

"ಅಕ್ಕಾ, ನಡೀಯಕ್ಕ ಮನೇಗ್ ಹೋಗಾಣ" ಎಂದು ಕುರ್ಚಿಯಿಂದೆದ್ದು ಒಬ್ಬನೇ ಹೊರಟ. ಬಾಗಿಲ ಬಳಿ ಹೋಗುತ್ತಿದ್ದ ಹೀರೊ ತಿರುಗಿ ವಿಕಾಸ್‌ನನ್ನು ನೋಡಿ, "ಥ್ಯಾಂಕ್ಯೂ ಸೋ ಮಚ್ ಸರ್, ನನ್ ಪಾಲಿನ್ ದೇವ್ರು ನೀವು... ಅಂಡ್ ಸಾರಿ ಸರ್, ಕಾಡಿದ್ರೂ ಪರವಾಗಿಲ್ಲ ನಂಗೆ ಆ ನನ್ನ ಹುಡುಗಿಯ ಕನ್ಸು ಬೇಕು. ಕನ್ಸು ಕೆಟ್ಟದಾಗಿದ್ರೂ ಅದು ಬಿದ್ದು, ಎದ್ದಮೇಲೆ ಸಿಗ್ತಾ ಇರೋ, ಅವ್ಳು ಚೆನ್ನಾಗಿದಾಳೆ ಅನ್ನೋ ಸಮಾಧಾನ ದೊಡ್ಡದು" ಎಂದು ನಕ್ಕ. ತನ್ನ ಹಿಂದೆಯೇ ಅಕ್ಕ ಬರುತ್ತಿದ್ದಾಳೆಂಬಂತೆ, "ಅಕ್ಕ ಬಾ" ಎಂದು ಅವಳಿಗೆ ಬಾಗಿಲನ್ನು ತೆರೆದು ಕ್ಷಣಗಳ ನಂತರ ಮುಚ್ಚಿಕೊಂಡ.

ಇಲ್ಲಿಗೆ ಬಂದ ಮೇಲೆ ತನ್ನದರೊಂದಿಗೆ ಬೇರೆ ನಾಲ್ಕು ಕನಸಿನ ಹಾಳೆಗಳನ್ನು ಓದಿ, ಅದರಲ್ಲಿನ ಪಾತ್ರಗಳನ್ನು ಮತ್ತು ಅವುಗಳ ಬದುಕನ್ನು ತನ್ನ ಜೀವನದಲ್ಲಿ ಘಟಿಸಿದ್ದು ಎಂದು ಭ್ರಮೆ ಹುಟ್ಟಿಸಿಕೊಂಡಿದ್ದಾನೆ ಹೀರೊ. ಅದನ್ನು ಅವನಿಗೆ ತಿಳಿ ಹೇಳಿ, ಅವನ ಆರೋಗ್ಯ ಸುಧಾರಿಸುವಂತೆ ಚಿಕಿತ್ಸೆ ನೀಡಲು ಅವಸರದಲ್ಲಿ ವಿಕಾಸ್ ಬಾಗಿಲು ತೆಗೆದ.

## 8

ವಿಕಾಸ್ ಹೊರಗೆ ಬಂದಾಗ, ಇನ್ನೇನು ಬಾಗಿಲು ಬಡಿಯಲು ತಯಾರಿದ್ದವನೆಂಬಂತೆ ಟ್ರೇಯಲ್ಲಿ ಕಾಫಿಯ ಬಟ್ಟಲನ್ನು ಹಿಡಿದುಕೊಂಡು ಇಪ್ಪತ್ತು ವರ್ಷದ ಹುಡುಗನೊಬ್ಬ ನಿಂತಿದ್ದ. ವಿಕಾಸನ್ನು ನೋಡಿದವನು, "ಸರ್, ಕಾಫೀ" ಎಂದ. ವಿಕಾಸ್ ಹೀರೊಗಾಗಿ ಅತ್ತಿತ್ತ ಕಣ್ಣು ಹಾಯಿಸಿದ, ಹೀರೋ ಅಲ್ಲಿಂದ ಹೋಗಿಯಾಗಿತ್ತು. "ಒಳಗಡೆ ಇಟ್ಟಿರು" ಎಂದ ವಿಕಾಸ್ ಹೀರೊನನ್ನು ಹುಡುಕಿಕೊಂಡು ಹೊರಟ.

ರೂಮ್ ಬಾಯ್ ಒಳಗೆ ಹೋಗಿ ಕಾಫಿಯನ್ನಿಟ್ಟು ಓಡಿ ಬಂದು ಕಾರಿಡಾರಿನೊಳಗೆ ಹೀರೋನನ್ನು ಹುಡುಕಿಕೊಂಡು ಹೊರಟಿದ್ದ ವಿಕಾಸ್‌ನ ಮುಂದೆ ಬಂದು ಏನೂ ಹೇಳದೇ ನಗುತ್ತಾ ನಿಂತ. ಹುಡುಗನ ನಗುವನ್ನು ಕಂಡ ವಿಕಾಸ್, ತನ್ನ ಜೇಬಿಗೆ ಕೈ ಹಾಕಿ ಐವತ್ತರ ನೋಟೊಂದನ್ನು ತೆಗೆದು ಅವನಿಗೆ ಕೊಡಲು ಹೋದ. ಹುಡುಗ, "ಸರ್, ದುಡ್ಡು ಬೇಡ" ಎಂದ. ವಿಕಾಸ್, "ಮತ್ತೇನು?" ಎಂದಾಗ ಹುಡುಗ ಏನನ್ನೋ ಹೇಳಲು ಹಿಂಜರಿಯಲತ್ತಿದ. ಹೀರೊನನ್ನು ತಡೆಯುವ ಅವಸರದಲ್ಲಿದ್ದ ವಿಕಾಸ್, "ಸ್ವಲ್ಪ ಹೊತ್ತು ಬಿಟ್ಟು ಬಾ ಮಾತಾಡಾಣ. ನನಗೆ ಸ್ವಲ್ಪ ಕೆಲ್ಸ ಇದೆ" ಎಂದು ಮುಂದಿನ ದಾರಿ ಹಿಡಿದ.

ರೂಮ್ ಬಾಯ್ ಟಕ್ಕನೇ, "ಸರ್, ಒಂದೇ ನಿಮಿಷ. ಪ್ಲೀಸ್ ಒಂದೇ ಒಂದ್ ಸೆಲ್ಫಿ ತಗೋಬೋದಾ? ನನ್ ಹುಡ್ಗೀಗೆ ನಿಮ್ಮನ್ನ ಕಂಡ್ರೆ ತುಂಬಾ ಇಷ್ಟ, ನೀವು ನಮ್ ಹೋಟ್ಲಿಗೆ ಬಂದಿದೀರಿ ಅಂತ ಗೊತ್ತಾದಾಗಿಂದ, ನೀನು ಅವ್ರ ಜೊತೇಲಿರೋ ಸೆಲ್ಫಿ ಕಳ್ಸು, ಇಲ್ಲಾ ನನ್ನತ್ರ ಮಾತಾಡ್ಬೇಡ ಅಂತ ಹಟ ಮಾಡಿ, ನನ್ ಮೇಲೆ ಸಿಟ್ಟಾಗಿದಾಳೆ, ನನ್ನತ್ರ ಮಾತಾಡ್ತಾನೇ ಇಲ್ಲ. ನಾಳೆ ಅವ್ಳ ಬರ್ಥಡೇ ಸರ್, ಪ್ಲೀಸ್ ಸರ್ ಒಂದೇ ಒಂದು ಸೆಲ್ಫಿ" ಎಂದು ಒಂದೇ ಉಸಿರಿಗೆ ಹೇಳಿ ವಿಕಾಸ್‌ರನ್ನು ನೋಡಿದ. ಡಾಕ್ಟರ್‌ಗಳನ್ನೂ ಮೆಚ್ಚುವ, ಆರಾಧಿಸುವ ಜನ ಇದ್ದಾರಲ್ಲಾ ಎಂದು ವಿಕಾಸ್‌ಗೆ ಅಚ್ಚರಿಯ ಜೊತೆ ಖುಷಿಯಾಯಿತು.

ಅವನು, "ಅದಕ್ಕೇನು, ಬೇಗ ತಗೋ." ಎಂದ. ತಾನು ಮೊಬೈಲ್ ತೆಗೆಯಲತ್ತಿದಾಗ, "ನನ್ ವಿಶಸ್ ಹೇಳು ನಿನ್ ಹುಡ್ಗೀಗೆ" ಎಂದ ವಿಕಾಸ್‌ನ ಮಾತು ಕೇಳಿ ಹುಡುಗ ಭರ್ಜರಿ ಖುಷಿಯಾದ.

ಸಂಭ್ರಮದಲ್ಲಿ ಪೋಸು ಕೊಟ್ಟ ವಿಕಾಸ್, ಮರುಕ್ಷಣವೇ ಮೊಬೈಲಿನ ಕ್ಲಿಕ್ ಸದ್ದಿನೊಂದಿಗೆ ಸೆರೆಯಾದ ಫೋಟೊವನ್ನೇ ದಿಟ್ಟಿಸಲತ್ತಿದ. ಫೋಟೊದೊಳಗೆ ಅವನ ಜಾಗದಲ್ಲಿ ಸ್ವಲ್ಪ ಹೊತ್ತಿನ ಮುಂಚಿನವರೆಗೂ ಅವನೊಂದಿಗೆ ಮಾತಾಡಿದ್ದ ಹೀರೊ ಮೂಡಿದ್ದ...

ಪ್ರತಿಕ್ರಿಯಿಸಿ: **feedback@sudha.co.in**